ಹೊಲಿಯುವವನಲ್ಲ, ಹೀಗೆಲ್ಲ ನಡುಬೀದಿಯಲ್ಲಿ ಹಾಡುವುದು ಶೋಭೆ ತರುವುದಿಲ್ಲ' ಎಂಬ ಸೂಚನೆ ನೀಡುತ್ತಾನೆ. ಗೋಡೆಯೊಂದಕ್ಕೆ ಆನಿ ನಿಂತರೆ, 'ನಿನ್ನ ದುಬಾರಿ ಕೋಟು ಕೊಳೆಯಾಗುತ್ತದೆ' ಎಂದು ಎಚ್ಚರಿಸುತ್ತಾನೆ ಮತ್ತೊಬ್ಬ. ಅಲ್ಲಿಂದ ಮನೆಗೆ ಹೋದರೆ ಆತನ ಹೆಂಡತಿ ಕೂಡಾ ಸುರಸುಂದರಿಯಾಗಿ ಬದಲಾಗಿರುತ್ತಾಳೆ. ಖುಷಿ ತಾಳಲಾರದೇ ಆತ ಆಕೆಯನ್ನು ಬರಸೆಳೆದು ಪೃಷ್ಠದ ಮೇಲೆರಡು ಬಾರಿಸುತ್ತಿರುವಂತೆ, ಆಕೆ ತಡೆದು, 'ಇದು ಹೆಣ್ಣನ್ನು ಪ್ರೀತಿಸುವ ರೀತಿಯೇ? ಹಾಗೆಲ್ಲಾ ಮಾಡುವುದು ಘನವಂತರ ಲಕ್ಷಣವಲ್ಲ' ಎನ್ನುತ್ತ ಕೋಪಿಸಿಕೊಂಡು ದೂರ ಸರಿಯುತ್ತಾಳೆ. ಹೀಗೆ ಅನೇಕ ಪ್ರಸಂಗಗಳನ್ನು ಎದುರಿಸಿದ ಆತ ಕೊನೆಗೆ ಈ ಶ್ರೀಮಂತಿಕೆಯೇ ಬೇಡವೆನ್ನುವ ನಿರ್ಧಾರಕ್ಕೆ ಬರುತ್ತಾನೆ.

ಎ.ಕೆ. ರಾಮಾನುಜನ್‌ರ 'ಅಂಗುಲ ಹುಳುವಿನ ಪರಕಾಯಪ್ರವೇಶ' ಕವಿತೆಯಲ್ಲಿ, ಅಂಗುಲದಷ್ಟು ಉದ್ದವಿರುವ ಹುಳವನ್ನು ಹಕ್ಕಿಯೊಂದು ತಿನ್ನಲು ಬಂದಾಗ, ಹಕ್ಕಿಯ ಬಾಲವನ್ನು ಅಳೆದು ಕೊಡುವ ಪ್ರಲೋಭನೆಯೊಡ್ಡಿ ಹುಳ ಬಚಾವಾಗುತ್ತದೆ. ಅಲ್ಲಿಂದ ಅದರ 'ಅಳತೆಯ ಜೀವನ' ಶುರುವಾಗುತ್ತದೆ. ಪೆಲಿಕನ್ ಕೊಕ್ಕು, ಮರಕುಟಕದ ಕಿರೀಟದ ಪಟ್ಟೆ, ಮುದಿಗೂಬೆಯ ಗರಿ ಉದುರಿದ ಹೊಟ್ಟೆ, ಹೆಸರಿಲ್ಲದ ಪುಕ್ಕ, ವಿಜಾತಿ ಶುಕ ಪಿಕಗಳ ಎದೆ, ಮುಖ, ನೆಲದವರಾರೂ ಕಾಣದ ಪಕ್ಷಿಯೋನಿ–ಪಕ್ಷಿಲಿಂಗ, ನಾಚಿಕೆ ಇಲ್ಲದ ನಾಚಿಕೆ ಅಂಗ, ಎಲ್ಲ ಹೊಕ್ಕು ನೋಡಿ, ಅಳೆದು ಅಳೆದು ಕೂಡಿ... ಕೊನೆಯಲ್ಲಿ ಕೋಗಿಲೆಯೊಂದರ ಹಾಡು ಅಳೆಯಬೇಕಾದ ಸಂದಿಗ್ಧ ಪರಿಸ್ಥಿತಿಯೂ ಅದಕ್ಕೆ ಬರುತ್ತದೆ.

ಈ ಎರಡೂ ಕೃತಿಗಳಲ್ಲಿ ನಯವಂತಿಕೆಯ ಬಗೆಗಿನ ಭಿನ್ನ ನಿಲುವನ್ನು ನಾವು ಗಮನಿಸಬಹುದು. ಚೆಕೋವ್‌ನ ಕತೆಯ ಚಮ್ಮಾರ ಶ್ರೀಮಂತಿಕೆಯನ್ನು ಧಿಕ್ಕರಿಸುವುದು, ಅದು ಬಯಸುವ ನಯ ನಾಜೂಕನ್ನು ಅಳವಡಿಸಿಕೊಳ್ಳಲಾಗದೇ ತಾನೇ? ಉಮೇದಿ ಬಂದಾಗ ಹಾಡಲಾರದ, ತನ್ನಿಷ್ಟದಂತೆ ಪ್ರೀತಿಸಲಾಗದ ತನ್ನದಲ್ಲದ ಅಭಿನಯ ಅವನಿಗೆ ಭಾರವೆನಿಸುತ್ತದೆ. ಆದರೆ, ರಾಮಾನುಜನ್‌ರ ಕವಿತೆಯಲ್ಲಿಯ ಹುಳದ ಪಾಡೇ ಬೇರೆ. ನಯವೆನ್ನುವುದು ಅದರ ಮೂಲ ಸ್ವಭಾವದಲ್ಲಿಯೇ ಇದೆ. ಆ ಗುಣವೇ ಅದಕ್ಕೆ ಮುಳುವಾಗಿದೆ ಕೂಡ. ಪ್ರತಿಯೊಬ್ಬರೂ ಅದರ ಸಜ್ಜನಿಕೆಯನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುವವರೇ ಎಂಬಲ್ಲಿಗೆ, 'ನಯ'ದ ವ್ಯಾಖ್ಯೆಗೆ ಹೊಸದೊಂದು ಮಗ್ಗುಲು ದೊರಕಿದಂತಾಯ್ತು.

ಜೈನಸಿದ್ಧಾಂತದಲ್ಲಿ 'ನಯವಾದ' ಎನ್ನುವ ಒಂದು ಪರಿಚ್ಛೇದವಿದೆ. ಈ ಜಗತ್ತಿನಲ್ಲಿ ಯಾವುದೇ ವಾದ, ತತ್ವ, ಸಂಗತಿಗಳು ಸುಳ್ಳಲ್ಲ, ಹಾಗೆಯೇ ಅವು ಪೂರ್ಣ ಸತ್ಯವೂ ಅಲ್ಲ. ಎಲ್ಲವೂ ತಂತಮ್ಮ ದೃಷ್ಟಿಕೋನದ ಪ್ರಕಾರ ನಿಜವಾಗಿರುತ್ತವೆ ಅನ್ನುತ್ತದದು. ಹೀಗೇ ಜಗತ್ತಿನ ಸಂಕೀರ್ಣ ವಾಸ್ತವಗಳನ್ನು ನಾವು ನೋಡಬಹುದಾದ ವಿವಿಧ ದೃಷ್ಟಿಕೋನಗಳನ್ನು ಏಳು ಪ್ರಕಾರದ 'ನಯ'ಗಳಾಗಿ ವಿಂಗಡಿಸುತ್ತದೆ ಜೈನರ ತತ್ವಶಾಸ್ತ್ರ. ಅದನ್ನು 'ಅನೇಕಾಂತವಾದ'ವೆಂದೂ ಹೇಳುತ್ತಾರವರು. (ಜೈನ ಕುಟುಂಬವೊಂದನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾದ ಶಾಂತಿನಾಥ ದೇಸಾಯಿಯವರ 'ಓಂ ಣಮೋ' ಕಾದಂಬರಿಯಲ್ಲಿ ಕೂಡಾ ಈ ವಿಷಯದ ಪ್ರಸ್ತಾಪವಿದೆ).

ನಾವಿಲ್ಲಿ ಚರ್ಚಿಸುತ್ತಿರುವ ಮನುಷ್ಯನ ನಯಗುಣವನ್ನು ಜೈನ ತತ್ವದಲ್ಲಿ ಹೇಳಿದ 'ನಯ'ಕ್ಕೆ ಸಮೀಕರಿಸಿ ನೋಡಬಹುದೇ? ನಿರ್ದಿಷ್ಟ ಅಭಿಪ್ರಾಯದ ನಿಲುವಿನಡಿಯಲ್ಲಿ ದಿಟವೆಂದೇ ಗೋಚರಿಸುವ ಹಾಗೂ ಅಂತಹುದೇ ಹಲವು ಅಭಿಪ್ರಾಯಗಳು ಏಕಕಾಲದಲ್ಲಿ ಅಸ್ತಿತ್ವದಲ್ಲಿರುವ ಸ್ಥಿತಿಯು 'ನಯ'ವೆಂದು ಕರೆಸಿಕೊಳ್ಳುತ್ತದೆ ಎಂದಾದರೆ, ಮನುಷ್ಯ ತನ್ನೊಳಗೆ ಅಳವಡಿಸಿಕೊಂಡಿರುವ ನಯ–ಸೌಜನ್ಯಗಳೂ ಪರೋಕ್ಷವಾಗಿ ಅದನ್ನೇ ಹೇಳುತ್ತವೆಯಲ್ಲವೇ? ಮನುಷ್ಯನ ಈ ನಡವಳಿಕೆ ಕೂಡಾ ಪೂರ್ಣ ಸತ್ಯದ ಪ್ರತಿಫಲನವೇನಲ್ಲ.